ಕರ್ನಾಟಕ ವಿಧಾನಸಭೆ

ಶುಕ್ರವಾರ 2ನೇ ಮಾರ್ಚ್ 2001ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10-10 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : ಶ್ರೀ ಎಂ.ವಿ. ವೆಂಕಟಪ್ಪರವರು ಪೀಠವನ್ನು ಅಲಂಕರಿಸಿದ್ದರು

ಪ್ರಶ್ನೋತ್ತರಗಳು

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಕೃಷಿ ವಿಜ್ಞಾನ ಕೇಂದ್ರಗಳ ಸ್ಥಾಪನೆ

46 (688) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೇಂದ್ರ ಸರ್ಕಾರದ ಐ.ಸಿ.ಎ.ಆರ್. ಸಂಸ್ಥೆಯ ಅಡಿಯಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಕೃಷಿ ವಿಜ್ಞಾನ ಕೇಂದ್ರವನ್ನು ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ಈಗ ಎಷ್ಟು ಜಿಲ್ಲೆಗಳಲ್ಲಿ ಇಂತಹ ಕೇಂದ್ರಗಳನ್ನು ಸ್ಥಾಪಿಸಲಾಗಿದೆ?

ಇ) ವಿಜಾಪುರ ಜಿಲ್ಲೆಗೆ ಕೃಷಿ ವಿಜ್ಞಾನ ಕೇಂದ್ರ ಮಂಜೂರಾಗಿದೆಯೇ?

ಈ) ಮಂಜೂರಾಗಿದ್ದಲ್ಲಿ ಅದರ ಕೆಲಸ ಯಾವ ಹಂತದಲ್ಲಿದೆ?

ಉ) ಮಂಜೂರಾಗದಿದ್ದಲ್ಲಿ ಮಂಜೂರಾತಿಗಾಗಿ ಸರ್ಕಾರವು ಕೈಗೊಂಡ ಕ್ರಮಗಳಾವುವು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಮಂತ್ರಿಗಳು) :

ಅ) ಹೌದು

ಆ) 13

ಇ) ಹೌದು

ಈ) ಉ) ಆಗಸ್ಟ್ 2000 ರಿಂದ ರೈತರ ಏಳಿಗೆಗಾಗಿ ಕಾರ್ಯನಿರ್ವಹಿಸುತ್ತಿದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಕೃಷಿ ಸಚಿವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ, ಐಸಿಆರ್ ಯೋಜನೆಯ ಅಡಿಯಲ್ಲಿ ಇಡೀ ರಾಜ್ಯದಲ್ಲಿ ಜಿಲ್ಲೆಗೊಂದು ಕೇಂದ್ರ ಸ್ಥಾಪನೆ ಮಾಡಬೇಕೆಂದು ಕೇಂದ್ರ ಸರ್ಕಾರ ಗುರಿಯನ್ನು ಇಟ್ಟುಕೊಂಡಿದೆ. ಆ ಯೋಜನೆಯಡಿಯಲ್ಲಿ ಕೃಷಿ ವಿಜ್ಞಾನ ಕೇಂದ್ರ ಬಿಜಾಪುರಕ್ಕೆ ಬರಬೇಕಾಗಿತ್ತು, ಬಂದಿದೆ. ಆದರೆ ದುರ್ದೈವ ಅದು ಯಾವರೀತಿಯಲ್ಲಿ ಬರಬೇಕಾಗಿತ್ತೋ ಆ ರೀತಿಯಿಂದ ಬರಲಿಲ್ಲ. ಏಕೆಂದರೆ ಅದಕ್ಕಿಂತ ಪೂರ್ವದಲ್ಲಿ 13 ಕೇಂದ್ರಗಳನ್ನು

ರಾಜ್ಯದಲ್ಲಿ ಸ್ಥಾಪನೆ ಮಾಡಿದ್ದಾರೆ. ಅಲ್ಲಿ ಕಟ್ಟಡದ ಸಮೇತ ಅಲ್ಲಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಪ್ರತಿಯೊಂದನ್ನು ಕೊಟ್ಟು ಮಂಜೂರಾತಿಯನ್ನು ಕೊಟ್ಟಿದ್ದಾರೆ. ದುರ್ದೈವ ಬಿಜಾಪುರಕ್ಕೆ ಕೊಟ್ಟಿರತಕ್ಕದ್ದರಲ್ಲಿ ಅಲ್ಲಿಗೆ ಕೇವಲ ಅಸಿಸ್ಟೆಂಟ್ ರೀಸರ್ಚ್ ಪ್ರೊಫೆಸರ್ಸ್ ಮಾತ್ರ ಕೊಟ್ಟಿದ್ದಾರೆ. ಅಲ್ಲಿಗೆ ಪ್ರೊಫೆಸರ್ಸ್ ಇಲ್ಲ, ವಾಹನ ಇಲ್ಲ, ಕಟ್ಟಡ ಇಲ್ಲ. ಇದು ಸಂಪೂರ್ಣ ಕೇಂದ್ರ ಸರ್ಕಾರದ ಯೋಜನೆಯೆಂದು ನನಗನ್ನಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಐಸಿಎಆರ್ ಯೋಜನೆಯಡಿಯಲ್ಲಿ ಕೇಂದ್ರಗಳನ್ನು ಕೊಡುವುದನ್ನು ಬಂದ್ ಮಾಡಿದ್ದಾರೆ. ಕೊಟ್ಟಿರುವುದರಲ್ಲಿ ಕೊನೆಯದು ಬಹುತೇಕ ಬಿಜಾಪುರ ಇರಬಹುದು. ಅದರ ಬಗ್ಗೆ ಕೇಂದ್ರಸರ್ಕಾರಕ್ಕೆ ನಿಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುವುದೇನೆಂದರೆ, ಫುಲ್‌ಫ್ಲೆಡ್ಜ್‌ಡ್ ಕಟ್ಟಡ, ವಾಹನ ಮತ್ತು ಪ್ರೊಫೆಸರ್‌ಗಳನ್ನು ಕೊಡಬೇಕು. ಈಗ ಕೇವಲ ನಾಲ್ಕು ಅಸಿಸ್ಟೆಂಟ್ ರೀಸರ್ಚ್ ಪ್ರೊಫೆಸರ್ಸ್ ಮಾತ್ರ ಕೊಟ್ಟಿದ್ದಾರೆ. ಏನೇನು ಅವಶ್ಯಕತೆ ಇದೆ ಅದನ್ನೆಲ್ಲ ಒದಗಿಸಿಕೊಡತಕ್ಕ ಪ್ರಯತ್ನ ಮಾಡುತ್ತೀರಾ? ಮಾನ್ಯ ಮುಖ್ಯಮಂತ್ರಿಗಳ ಸಲಹೆ ಮೇರೆಗೆ ತಾವು ಕೃಷಿ ಸಚಿವರು ಬಿಜಾಪುರಕ್ಕೆ ಬಂದಿದ್ದೀರಿ. ತಾವು ಅಲ್ಲಿಗೆ ಬಂದಾಗ ಬಿಜಾಪುರ ಕೃಷಿ ವಿಜ್ಞಾನ ಕೇಂದ್ರಕ್ಕೆ ಬಹಳಷ್ಟು ವಾಗ್ದಾನ ಮಾಡಿ ಬಂದಿದ್ದೀರಿ. ಅಲ್ಲಿ ಕಟ್ಟಡವಿಲ್ಲ, 5 ಕೋಟಿ ರೂಪಾಯಿಗಳ ಕಟ್ಟಡ ಆಗಬೇಕಾಗಿದೆ. ಕಳೆದ ಐದು ವರ್ಷಗಳಿಂದ ಅದು ಆಗುತ್ತಿಲ್ಲ. ತಾವು ಅಲ್ಲಿಗೆ ಬಂದಾಗ ಕಟ್ಟಡ ಕಟ್ಟಿಸಿಕೊಡುತ್ತೇನೆಂದು ವಾಗ್ದಾನ ಮಾಡಿದ್ದೀರಿ, ಅದು ಇದುವರೆಗೂ ಆಗಲಿಲ್ಲ. ಕೊನೆಯಪಕ್ಷ ಅಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಹಾಸ್ಟಲ್ ಕಟ್ಟಡ, ಅದನ್ನಾದರೂ ಕಟ್ಟಿಸುತ್ತೇನೆಂದು ವಾಗ್ದಾನ ಮಾಡಿದ್ದೀರಿ. ಅದನ್ನು ಕೂಡ ಇದುವರೆಗೆ ಮಾಡಲಿಲ್ಲ. ನನ್ನ ಈ ಎರಡು ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರೆ ನಮಗೆ ಸಹಾಯ ಮಾಡಿದಂತಾಗುತ್ತದೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ಉತ್ತರ ಏನೆಂದರೆ ತಮಗೆ ಗೊತ್ತಿರುವ ಹಾಗೆ ಐಸಿಎಆರ್ ವ್ಯಾಪ್ತಿಯಲ್ಲಿ ಫುಲ್‌ಫ್ಲೆಡ್ಜ್‌ಡ್ ಕೆವಿಕೆಗಳನ್ನು ಕೇಂದ್ರ ಸರ್ಕಾರದವರು ಮೊದಲು ಕೊಡುತ್ತಿದ್ದರು. ಅದು ಎನ್‌ಆರ್‌ಎಪಿ ಮತ್ತು ಐಸಿಎಆರ್‌ಯಲ್ಲಿ ಕೊಡುತ್ತಿದ್ದರು. ಇಡೀ ದೇಶದಲ್ಲಿರತಕ್ಕ ಎಲ್ಲಾ ಜಿಲ್ಲೆಗಳಿಗೆ ಕೊಡಬೇಕೆನ್ನುವುದು ಐಸಿಎಆರ್ ಮತ್ತು ಕೇಂದ್ರ ಸರ್ಕಾರದ ತೀರ್ಮಾನ. ಆ ಪ್ರಕಾರ ಕೆವಿಕೆಗಳನ್ನು ಕೊಡುತ್ತಿದ್ದರು. ಅದರಲ್ಲಿ 15-16 ಸಿಬ್ಬಂದಿಯನ್ನು ಕೊಡತಕ್ಕ ಅವಕಾಶವಿತ್ತು. ಅದರಲ್ಲಿ ಯೂನಿಟ್ ಹೆಡ್ ಪ್ರೊಫೆಸರ್, ಅಸಿಸ್ಟೆಂಟ್ ಪ್ರೊಫೆಸರ್ಸ್, ನಾನ್-ಟೀಚಿಂಗ್ ಸ್ಟ್ಯಾಫ್ ಇರುತ್ತಿದ್ದರು. ಆದರೆ ಈಗ ICAR has come out with a new policy with the assistance of World Bank NARP ಎನ್ನತಕ್ಕದ್ದನ್ನು ಮಾಡಿ, ರಿಮ್ಯಾನ್‌ಟೆಡ್ KVK ಎಂದು ಹೊಸದಾಗಿ ಮಾಡಿ ನಾಲ್ಕು ಜನ ಅಸಿಸ್ಟೆಂಟ್ ರೀಸರ್ಚ್ ಪ್ರೊಫೆಸರ್ಸ್ ಬಿಟ್ಟರೆ ನಾನ್-ಟೀಚಿಂಗ್ ಸ್ಟ್ಯಾಫ್ ಕೊಡುತ್ತಿಲ್ಲ. ಇದು ಆಲ್ ಇಂಡಿಯಾ ಪ್ಯಾಟ್ರನ್. ಈ ಪ್ಯಾಟ್ರನ್ ಪ್ರಕಾರ ಕೊಡುತ್ತಿದ್ದಾರೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಖಾಸಗಿ ಕ್ಷೇತ್ರಗಳು ಸೇರಿದಂತೆ ಮೈಸೂರಿನ ಸುತ್ತೂರು, ಗದಗ್ ಈ ಖಾಸಗಿ ಕ್ಷೇತ್ರಗಳು ಸೇರಿದಂತೆ 17 ಕೆವಿಕೆಗಳು ಎಸ್ಟಾಬ್ಲಿಷ್ ಆಗಿ ಅಲ್ಲೆಲ್ಲಾ ಕೆಲಸ ನಡೆಯುತ್ತಿದೆ. ಇನ್ನು ಉಳಿದ 11ಕ್ಕೂ ಕೂಡ ಮಂಜೂರಾತಿಯನ್ನು ಕೊಡಬೇಕೆಂದು ನಾವು ಎರಡು ಸಾರಿ ಸಭೆ ಮಾಡಿ ಕೇಂದ್ರ ಸರ್ಕಾರದ ಐಸಿಎಆರ್ ಅವರನ್ನು ಕರೆದು ಚರ್ಚೆ ಮಾಡಿದ್ದೇವೆ. 11 ಕೇಂದ್ರಗಳನ್ನು ಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಅವರು ಕೊಟ್ಟಿದ್ದಾರೆ.

ವರ್ಷಕ್ಕೆ ಎರಡು ಮೂರು ಕೊಡತಕ್ಕ ಸಂದರ್ಭದಲ್ಲಿ ಸರ್ಕಾರದ ಉದ್ದೇಶ ಇನ್ನು ನಾಲ್ಕೈದು ವರ್ಷಗಳಲ್ಲಿ 11 ಕೇಂದ್ರಗಳನ್ನು ತೆಗೆದುಕೊಂಡು ಎಲ್ಲಾ ಜಿಲ್ಲೆಗಳಿಗೆ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆನ್ನುವುದು ಸರ್ಕಾರದ ಉದ್ದೇಶ. ಬಿಜಾಪುರಕ್ಕೆ ಬಿಲ್ಡಿಂಗ್ ಏಕೆ ಕೊಡಲಿಲ್ಲವೆಂದರೆ ಬಿಜಾಪುರ ಕೇಂದ್ರ ಕಾಲೇಜಿಗೆ ಅಟ್ಯಾಚ್ ಆಗಿರತಕ್ಕದ್ದು. It is a remantated KVK. ಆ ಕಾರಣಕ್ಕೋಸ್ಕರ ಕೊಟ್ಟಿಲ್ಲ. ಕೃಷಿ ವಿಜ್ಞಾನ ಕೇಂದ್ರಕ್ಕೆ 30ಲಕ್ಷ ರೂಪಾಯಿಗಳವರೆಗೆ ಬಿಲ್ಡಿಂಗ್ ಗ್ರಾಂಟ್‌ನ ಕೊಡುವುದಕ್ಕೆ ಅವಕಾಶವಿದೆ. ಬಿಜಾಪುರದಲ್ಲಿ ಕಾಲೇಜು ಇದೆ ಎನ್ನುವ ಕಾರಣಕ್ಕೋಸ್ಕರ ಐಸಿಎಆರ್‌ನವರು ವಾಪಸ್ಸು ಕಳುಹಿಸಿದ್ದಾರೆ; ಮತ್ತೆ ಅವರಿಗೆ ವಿನಂತಿ ಮಾಡಿ, ಕಾಲೇಜು ಬಿಲ್ಡಿಂಗ್ ಕಡಿಮೆಯಿದೆ, ಕೆವಿಕೆಗಳು ಬಿಲ್ಡಿಂಗ್ ಕೊಡದಿದ್ದರೆ ಕಷ್ಟವಾಗುತ್ತದೆಂದು ನಾವು ಪತ್ರ ಬರೆದು ತಿಳಿಸುತ್ತೇವೆ. ನಾನು ಅಲ್ಲಿಗೆ ಬಂದಾಗ ಅದನ್ನು ಮನಗಂಡಿದ್ದೇನೆ. ಮತ್ತೊಮ್ಮೆ ಕೇಂದ್ರಸರ್ಕಾರವನ್ನು ರಿಕ್ವೆಸ್ಟ್ ಮಾಡಿ ಬಿಲ್ಡಿಂಗ್ ಗ್ರಾಂಟನ್ನು ತರಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ನಾನು ನಿಮಗೆ ಹೇಳುವುದು ಅದನ್ನೆ; ಕಾಲೇಜು ಕಟ್ಟಡ ಪೂರ್ತಿಯಿಲ್ಲ. ಅಲ್ಲಿರತಕ್ಕ ಮಕ್ಕಳಿಗೆ ಹಾಸ್ಟಲ್ ಕಟ್ಟಡವಿಲ್ಲ. ಅಲ್ಲಿಗೆ ನೀವು ಬಂದಾಗ ಅದು ನಿಮಗೆ ಗೊತ್ತಿದೆ. ರಿಮ್ಯಾನ್‌ಟೆಡ್ ಸ್ಕೀಮ್‌ನಲ್ಲಿ ತೆಗೆದು ಕೊಂಡಿದ್ದೇವೆಂದರೆ, ಅದು ಮೂರು ವರ್ಷಕ್ಕೆ ಮಾತ್ರ. ರಾಜ್ಯದಲ್ಲಿ ಉಳಿದ ಕಡೆ ಮಂಜೂರಾಗಿರತಕ್ಕದ್ದು ಬಹಳ ಇರುತ್ತದೆ. ಎನ್‌ಎಟಿಪಿ-ಯಲ್ಲಿರತಕ್ಕದ್ದು ಮೂರು ವರ್ಷ ಮಾತ್ರ. ನಿಮ್ಮಲ್ಲಿ ಅದಕ್ಕಾಗಿ ರಕ್ವೆಸ್ಟ್ ಮಾಡಿಕೊಳ್ಳುವುದೇನೆಂದರೆ ಅದನ್ನು ಫುಲ್‌ಫ್ಲೆಡ್ಜ್‌ಡ್ ಮಾಡಲಿಕ್ಕೆ ಸರ್ಕಾರದಿಂದ ಕೇಂದ್ರಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದರೆ ಸ್ವಲ್ಪಮಟ್ಟಿಗೆ ಏನಾದರೂ ನಾವು ಪ್ರಯತ್ನ ಮಾಡಬಹುದು. ಅಕಸ್ಮಾತ್ ಮೂರು ವರ್ಷಗಳ ನಂತರ ಅವರು ವೈಂಡ್‌ಅಪ್ ಆಡುತ್ತೇವೆಂದರೆ, ಅವುಗಳನ್ನು ರಾಜ್ಯಸರ್ಕಾರದ ವತಿಯಿಂದ ನಿರ್ವಹಿಸಿಕೊಂಡು ಹೋಗತಕ್ಕ ಪ್ರಯತ್ನ ಮಾಡುತ್ತೀರಾ? ಕಾಲೇಜು ಕಟ್ಟಡ ಕಟ್ಟಲಿಕ್ಕೆ ಇರತಕ್ಕ 5 ಕೋಟಿ ರೂಪಾಯಿಗಳಲ್ಲಿ, ಈ ವರ್ಷದಲ್ಲಿ ಅಯವ್ಯಯದಲ್ಲಿ ಸೇರಿಸಿ ಏನಾದರೂ ಹಣಕಾಸು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಕೊನೆಯ ಪಕ್ಷ ಹಾಸ್ಟೆಲ್ ಬಿಲ್ಡಿಂಗ್‌ಗೆ 30 ಲಕ್ಷ ಬೇಕಾಗಿದೆ, ಅದನ್ನು ಕೊಡುತ್ತೀರಾ? ಆ ವಿದ್ಯಾರ್ಥಿಗಳು ಎಲ್ಲಿ ಮಲಗಿಕೊಳ್ಳಬೇಕು? ಅದು ಬಿಜಾಪುರ ಸಿಟಿಯಿಂದ 22ಕಿಲೋ ಮೀಟರ್ ದೂರದಲ್ಲಿದೆ. ಅವರು ಎಲ್ಲೂ ಕೂಡ ಉಳಿದುಕೊಳ್ಳುವುದಕ್ಕೆ ವ್ಯವಸ್ಥೆ ಇಲ್ಲ. ಇದು ನಿಮಗೆ ಗೊತ್ತಿದೆ. ಹಾಸ್ಟಲ್ ಬಿಲ್ಡಿಂಗ್ ಮತ್ತು ಕ್ಯಾಂಪಸ್ ಬಿಲ್ಡಿಂಗ್ ಎರಡಕ್ಕೂ ಹಣ ಒದಗಿಸಿ ಕಟ್ಟಡ ಕಟ್ಟಿಸಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೂಡ ವಿನಂತಿ ಮಾಡಿಕೊಳ್ಳುತ್ತೇನೆ. ಸರ್, ತಾವು ಬಿಜಾಪುರಕ್ಕೆ ಬಂದಿದ್ದಾಗ ಈ ಬಗ್ಗೆ ತಾವೇ ಮಾನ್ಯ ಕೃಷಿ ಸಚಿವರಿಗೆ ಒಂದು ಸಲಹೆಯನ್ನು ಕೊಟ್ಟು ಏನೇನು ಸಮಸ್ಯೆಗಳಿವೆ ಎಂದು ನೋಡಿಕೊಂಡು ಬರುವುದಕ್ಕೆ ಅವರನ್ನು ಬಿಜಾಪುರಕ್ಕೆ ಕಳಿಸಿದ್ದಿರಿ. ಹಾರ್ಟಿಕಲ್ಚರ್ ರೀಸರ್ಚ್ ಇಶ್ಯೂವಿನಲ್ಲಿ ಕೂಡ ತಾವು ಒಂದು ಹಾರ್ಟಿಕಲ್ಚರ್ ವೇರ್‌ನ್ನು ಮಾಡತಕ್ಕಂಥ ಸಲಹೆಯನ್ನು ಕೂಡ ತಾವು ಅವರಿಗೆ ಕೊಟ್ಟಿದ್ದೀರಿ. ಮತ್ತು ಇನ್ನೊಂದು ಫುಡ್ ಪ್ರೊಸಿಂಗ್ ಪಾರ್ಕ್ ಕೂಡ ಬಿಜಾಪುರಕ್ಕೆ ಮಾಡಿಕೊಡುತ್ತೇವೆ ಎಂದು ಸಲಹೆಯನ್ನು ಕೂಡ ತಾವು ಕೊಟ್ಟಿದ್ದೀರಿ. ಆದರೆ ಇವೆರಡೂ ಕೂಡ ಕಾರ್ಯರೂಪಕ್ಕೆ ಬಂದಿಲ್ಲ. ತಾವು ಬಂದು ಹೇಳಿ ಹೋದಿರಿ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ದುರ್ದೈವದಿಂದ ಇಪತ್ತು ಫುಡ್‌ಪ್ರೊಸೆಸಿಂಗ್ ಪಾರ್ಕ್

ಆಗಿಲ್ಲ, ಮತ್ತು ಹಾರ್ಟಿಕಲ್ಚರ್ ರೀಸರ್ಚ್ ವೇರ್ ಏನು ಆಗಬೇಕಾಗಿತ್ತು ಅದು ಕೂಡ ಆಗಿಲ್ಲ. ಕೊನೆಯಪಕ್ಷ ಆಗ್ರಿಕಲ್ಚರ್ ಕಾಲೇಜಿನಲ್ಲಿ ಸರಿಯಾದ ಕಟ್ಟಡ ಇಲ್ಲ. ನಮ್ಮಲ್ಲಿ 1990 ರಲ್ಲಿ ಕೃಷಿ ಕಾಲೇಜು ಪ್ರಾರಂಭವಾಗಿ ಕಟ್ಟಡ ಅರ್ಧದಷ್ಟು ನಿರ್ಮಾಣವಾಗಿ ಹಾಗೆಯೇ ನಿಂತುಬಿಟ್ಟಿದೆ. ಆ ಕಟ್ಟಡಕ್ಕೆ ಇನ್ನೂ ಐದು ಕೋಟಿ ರೂಪಾಯಿಗಳಷ್ಟು ಹಣ ಬೇಕಾಗಿದೆ. ಕೊನೆಯಪಕ್ಷ ಹಾಸ್ಟೆಲ್‌ನಲ್ಲಿರತಕ್ಕಂಥ ಮಕ್ಕಳ ಅನುಕೂಲಕ್ಕಾಗಿ 50 ಲಕ್ಷ ರೂಪಾಯಿಗಳಾದರೂ ಬೇಕು. ಈ ವರ್ಷದ ಆಯವ್ಯಯದಲ್ಲಿ ಅದನ್ನಾದರೂ ಒದಗಿಸಿಕೊಡುವುದಕ್ಕೆ ತಾವು ಸಲಹೆ ಮಾಡಿದರೆ ನಾವು ತಮಗೆ ಕೃತಜ್ಞರಾಗಿರುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ತಾವು ಹೇಳಿದ ರೀತಿಯಲ್ಲಿ Remantated ಕೆ.ವಿ.ಕೆ.ಗಳಿಗೆ ಮೂರು ವರ್ಷಗಳು ಅಂತ ಇರತಕ್ಕದ್ದು ಏನಿದೆ, ಅದು ಐ.ಸಿ.ಎ.ಆರ್. ನವರು ನಿಗದಿ ಮಾಡಿರತಕ್ಕದ್ದು. ಯಾವುದೇ ಸಂದರ್ಭದಲ್ಲಿ ಅದನ್ನು ಮುಚ್ಚುವುದಕ್ಕೆ ಅವಕಾಶವಿಲ್ಲ ಮೂರು ವರ್ಷಗಳಾದಮೇಲೂ ಸಹಿತ ಒಂದು ಪಕ್ಷೆ ಅವರು ಏನಾದರೂ ಐ.ಸಿ.ಎ.ಆರ್.ನಿಂದ ಬೆಂಬಲ ಕೊಡದೇ ಇದ್ದರೆ ನಮ್ಮ ರಾಜ್ಯ ಸರ್ಕಾರದ ನಮ್ಮ ಬಜೆಟ್‌ನಿಂದಲೇ ಅದನ್ನು ನಡೆಸುವುದಕ್ಕೆ ನಾವು ತಯಾರಿದ್ದೇವೆ. ಏಕೆಂದರೆ ಕೃಷಿ ವಿಜ್ಞಾನ ಕೇಂದ್ರ ಟೆಕ್ನಾಲಜಿ ಟ್ರಾನ್ಸ್‌ಫರ್‌ನಲ್ಲಿ ಸಾಕಷ್ಟು ಮಹತ್ವದ ಪಾತ್ರ ವಹಿಸುತ್ತವೆ. ಈ ಸಂದರ್ಭದಲ್ಲಿ ಐ.ಸಿ.ಎ.ಆರ್. ಅದನ್ನು ಮುಂದುವರೆಸಿಕೊಂಡು ಹೋಗುವ ವಿಶ್ವಾಸ ಇದೆ. ಒಂದು ಪಕ್ಷ ಅವರು ಮುಂದುವರೆಸದಿದ್ದರೆ ವಿಶ್ವ ವಿದ್ಯಾನಿಲಯದಿಂದ ಮುಂದುವರೆಸುವುದಕ್ಕೆ ನಾವು ತಯಾರಿದ್ದೇವೆ. ತಾವು ಕೇಳಿದ ಕಾಲೇಜು ಕಟ್ಟಡದ ಬಗ್ಗೆ ಈ ಸಲ ಬಜೆಟ್‌ನಲ್ಲಿ ಏನು ಹಣ ಬರುತ್ತದೆ ಎಂದು ನೋಡಿ ನಿಗದಿ ಮಾಡಬೇಕಾಗುತ್ತದೆ. ನನಗೂ ಕೂಡ ಅದರ ಅರಿವು ಆಗಿದೆ. ಅರ್ಧಂಬರ್ಧ ಆಗಿರತಕ್ಕಂಥ ಕಟ್ಟಡಗಳು ಏನಿವೆ. ವಿಶೇಷವಾಗಿ ಬಿಜಾಪುರದಲ್ಲಿ ತೋಟಗಾರಿಕೆಗೆ ಹೆಚ್ಚು ಒತ್ತು ಕೊಡುವಂಥ ಸಂದರ್ಭ ಇರುವುದರಿಂದ, ಅಲ್ಲಿ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಕೂಡ ಬರುತ್ತಿದ್ದಾರೆ. ಹಾಗಾಗಿ ಕಟ್ಟಡದ ಅವಶ್ಯಕತೆ ಇರುವುದು ನಮಗೆ ಗೊತ್ತಿದೆ. ಈ ಸಾರಿ ಬಜೆಟ್‌ನಲ್ಲಿ ಹಣ ಬರತಕ್ಕದ್ದು ನೋಡಿ ಆದ್ಯತೆ ಮೇಲೆ ಕೊಡತಕ್ಕಂಥ ಕೆಲಸವನ್ನು ನಾನು ಮಾಡುತ್ತೇನೆ.

ಅಧ್ಯಕ್ಷರು : ಪ್ರಶ್ನೆ 47 (352) ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ ಮತ್ತು ಪ್ರಶ್ನೆ 49(334) ಶ್ರೀ ಕೆಬಿ. ಕೋಳಿವಾಡ್‌ರವರ ಪ್ರಶ್ನೆಗಳು ಒಂದೇ ರೀತಿಯ ಪ್ರಶ್ನೆಗಳಾಗಿವೆ. ಆದ್ದರಿಂದ ಮೊದಲು ಶ್ರೀ ಮಹದೇವ್ ಪ್ರಸಾದ್ ರವರು ಕೇಳುತ್ತಾರೆ. ಆನಂತರ ಮಾನ್ಯ ಕೋಳಿವಾಡ್‌ರವರು ಪ್ರಶ್ನೆ ಕೇಳಲಿ. ಮಂತ್ರಿಗಳು ಎರಡಕ್ಕೂ ಸೇರಿಸಿ ಉತ್ತರವನ್ನು ನೀಡಲಿ.

ಜಿಲ್ಲಾ ಕಛೇರಿಗಳ ಸಮುಚ್ಚಯ ನಿರ್ಮಾಣ

47 (352) ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಚಾಮರಾಜನಗರದಲ್ಲಿ ಜಿಲ್ಲಾ ಕಛೇರಿಗಳ ಸಮುಚ್ಚಯ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕಾಗಿ ಕೈಗೊಂಡಿರುವ ಕ್ರಮಗಳೇನು;

ಇ) ಈವರೆಗೆ ಬಿಡುಗಡೆ ಮಾಡಿರುವ ಹಣ ಎಷ್ಟು?